/997999

# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 651
ಸದಸ್ಯರ ಹೆಸರು : ಡಾ|| ಚಂದ್ರಶೇಖರ್ ಬಿ. ಪಾಟೀಲ್
ಉತ್ತರಿಸುವ ಸಚಿವರು : ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು
ಉತ್ತರಿಸುವ ದಿನಾಂಕ : 23.12.2022

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಬೀದರ್ ಜಿಲ್ಲೆಯ ವ್ಯಾಪ್ತಿಯಲ್ಲಿ ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆಯಿಂದ ಎಷ್ಟು ಬಸ್ಸು ಚಾಲನೆಯಲ್ಲಿವೆ; (ತಾಲ್ಲೂಕುವಾರು ವಿವರ ನೀಡುವುದು) | ಬೀದರ್ ಜಿಲ್ಲೆಯ ವ್ಯಾಪ್ತಿಯಲ್ಲಿ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದಿಂದ 06 ಘಟಕಗಳನ್ನೊಳಗೊಂಡಂತೆ ಒಟ್ಟಾರೆ 570 ವಾಹನಗಳು ಕಾರ್ಯಾಚರಣೆಯಲ್ಲಿದ್ದು, ಘಟಕವಾರು ವಿವರ ಈ ಕೆಳಕಂಡಿರುತ್ತದೆ: |

| ಕ್ರ.ಸಂ. | ಘಟಕ | ಚಾಲನೆಯಲ್ಲಿರುವ ಬಸ್‌ಗಳ ಸಂಖ್ಯೆ |
|---|---|---|
| 1 | ಬೀದರ (ಘಟಕ-1 & ಘಟಕ-2) | 190 |
| 2 | ಹುಮನಾಬಾದ | 103 |
| 3 | ಭಾಲ್ಕಿ | 105 |
| 4 | ಬಸವಕಲ್ಯಾಣ | 93 |
| 5 | ಔರಾದ | 79 |
| | ಒಟ್ಟು | **570** |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಆ | ಜಿಲ್ಲೆಯ ವ್ಯಾಪ್ತಿಯಲ್ಲಿ ಹೆಚ್ಚಾಗಿ ಹಳೆಯ ಬಸ್ಸುಗಳು ಸಂಚರಿಸುತ್ತಿರುವುದರಿಂದ ಜನರ ಪ್ರಾಣ ಹಾನಿಯಾದರೆ ಯಾರು ಹೊಣೆ; | ಜಿಲ್ಲೆಯ ವ್ಯಾಪ್ತಿಯ ಎಲ್ಲಾ ವಾಹನಗಳ ನಿರ್ವಹಣೆಯನ್ನು ಸಮರ್ಪಕವಾಗಿ ಕೈಗೊಳ್ಳಲಾಗುತ್ತಿದ್ದು, ವಾಹನಗಳಲ್ಲಿನ ದೋಷಗಳಿಂದಾಗಿ ಯಾವುದೇ ಅಪಘಾತವಾಗಿರುವುದಿಲ್ಲ.<br><br>ಸಂಸ್ಥೆಯಲ್ಲಿ ವಾಹನಗಳನ್ನು ನಿಷ್ಕ್ರಿಯಗೊಳಿಸಲು ಲೇಲಾಂಡ, ಟಾಟಾ ಮೋಟಾರ್ಸ್, ಐಶರ್ ಮತ್ತು ತತ್ಸಮಾನ ಮಾದರಿಯ ವಾಹನಗಳ ಜೀವಿತಾವಧಿಯನ್ನು 9.00 ಲಕ್ಷ ಹಾಗೂ ಹವಾನಿಯಂತ್ರಿತ ಕರೋನಾ ಸ್ಲೀಪರ್ ವಾಹನದ ಜೀವಿತಾವಧಿಯನ್ನು 11.00 ಲಕ್ಷ ಕಿ.ಮೀ.ಗೆ ನಿಗದಿಪಡಿಸಲಾಗಿರುತ್ತದೆ. ನಿಗದಿತ ಕಿ.ಮೀ. ಕ್ರಮಿಸಿದ ವಾಹನಗಳು ಸುಸ್ಥಿತಿಯಲ್ಲಿದ್ದಲ್ಲಿ, ಅವುಗಳನ್ನು ಸಾರಿಗೆ ಪ್ರಾಧಿಕಾರದಿಂದ ರಹದಾರಿ ನವೀಕರಣ ಕೈಗೊಂಡು, ಕಾರ್ಯಾಚರಣೆಯನ್ನು ಮುಂದುವರೆಸಲಾ |



Generated from eOffice by B SREERAMULU, TD-MIN(BS), TRANSPORT MINISTER, Trans on 20/12/2022 03:09 PM

997999

| | | |
|---|---|---|
| | | ಗುತ್ತದೆ. ಸರ್ಕಾರದ ಆದೇಶದಂತೆ 15 ವರ್ಷ ವಯೋಮಿತಿಯ ವಾಹನಗಳನ್ನು ಕಾರ್ಯಾಚರಣೆಯಿಂದ ಸ್ಥಗಿತಗೊಳಿಸಿ ನಿಷ್ಕ್ರಿಯೆಗೊಳಿಸಲಾಗುತ್ತದೆ. 15 ವರ್ಷ ಪೂರೈಸಿರುವ ಯಾವುದೇ ವಾಹನಗಳು ಕಾಯಾಚರಣೆಯಲ್ಲಿರುವುದಿಲ್ಲ. |
| ಇ | ಬೀದರ್ ಜಿಲ್ಲೆ ವ್ಯಾಪ್ತಿಯಲ್ಲಿ ಹೊಸದಾಗಿ ಎಷ್ಟು ಬಸ್ಸುಗಳನ್ನು ನೀಡಲಾಗಿದೆ? (ತಾಲ್ಲೂಕವಾರು ವಿವರ ನೀಡುವುದು) | ಕೋವಿಡ್-19 ಹಿನ್ನೆಲೆಯಲ್ಲಿ ಸಂಸ್ಥೆಯಲ್ಲಿ ಬಸ್ಸುಗಳು ಸಹಜ ಕಾರ್ಯಾಚರಣೆಗೊಳ್ಳದೇ ಇದ್ದರಿಂದ, ಸಂಸ್ಥೆಯು ಆರ್ಥಿಕ ಸಂಕಷ್ಟದಲ್ಲಿದ್ದು, 2020-21 ಹಾಗೂ 2021-22ನೇ ಸಾಲಿನಲ್ಲಿ ಹೊಸ ಬಸ್ಸುಗಳನ್ನು ಖರೀದಿಸಲು ಸಾಧ್ಯವಾಗಿರುವುದಿಲ್ಲ.<br><br>ಪ್ರಸಕ್ತ ಸಾಲಿನಲ್ಲಿ 650 ಹೊಸ ವಾಹನಗಳ ಖರೀದಿ ಕುರಿತು ಟೆಂಡರ್ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ. ಹೊಸ ವಾಹನಗಳ ಸೇರ್ಪಡೆ ನಂತರ ಬೀದರ್ ವಿಭಾಗವನ್ನೊಳಗೊಂಡಂತೆ ಸಂಸ್ಥೆಯ ವ್ಯಾಪ್ತಿಯ ವಿಭಾಗ/ ಘಟಕಗಳ ಅಗತ್ಯಕ್ಕೆ ತಕ್ಕಂತೆ ಹೊಸ ವಾಹನಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದು. |

ಸಂಖ್ಯೆ: ಟಿಡಿ 283 ಟಿಸಿಕ್ಯೂ 2022

(ಬಿ. ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ
ಕಲ್ಯಾಣ ಸಚಿವರು



nerated from eOffice by B SREERAMULU, TD-MIN(BS), TRANSPORT MINISTER, Trans on 20/12/2022 03:09 PM